ಸರಿಯಾಗಿ ರಸ್ತೆ ಜೋಡಿಸಿಲ್ಲ | ಡಿವೈಡರ್‌ನಲ್ಲಿ ಬೆಳೆದ ಮುಳ್ಳುಕಂಟಿಗಳು | ರಸ್ತೆ ಕುಸಿದು ಅಪಘಾತ ಸಂಭವ!

ನರೇಗಲ್ಲ–ಕೋಡಿಕೊಪ್ಪ ಕಾಂಕ್ರೀಟ್ ರಸ್ತೆ ಬೇಕಾಬಿಟ್ಟಿ ನಿರ್ಮಾಣ

■ ಆದರ್ಶ ಕುಲಕರ್ಣಿ

ನರೇಗಲ್ಲ: ಪಟ್ಟಣದಿಂದ ಕೋಡಿಕೊಪ್ಪದ ಮಧ್ಯೆ ಕಾಂಕ್ರೀಟಿನ ಜೋಡು ರಸ್ತೆಯಾದಾಗ ಜನತೆ ಅದೆಷ್ಟು ಸಂತಸ ಪಟ್ಟಿದ್ದರು. ಈ ರಸ್ತೆ ರೈತ ಸಂಪರ್ಕ ಕೇಂದ್ರದಿಂದ ಕಾಲೇಜಿನವರೆಗೆ (ಅರ್ಧ) ಪೂರ್ಣವಾಗಿದ್ದು ಜನತೆಗೆ ನಿರಾಶೆಯುನ್ನುಂಟು ಮಾಡಿದೆ. ಮಾಡಿದ ರಸ್ತೆಯನ್ನಾದರೂ ಗುತ್ತಿಗೆದಾರರು ಸಮರ್ಪಕವಾಗಿ ಮಾಡಿಲ್ಲವೆಂಬ ಕೂಗು ಸಾರ್ವಜನಿಕರಿಂದ ಕೇಳಿ ಬರುತ್ತಿದೆ.

ಪಟ್ಟಣದ ರೈತ ಸಂಪರ್ಕ ಕೇಂದ್ರದ ಬಳಿ ರಸ್ತೆ ಎತ್ತರವಾಗಿದೆ. ಮೂಲ ರಸ್ತೆ ಜೋಡಿಸುವಾಗ ಮಾಡಬೇಕಾದ ಇಳಿಜಾರನ್ನು ಸಮರ್ಪಕವಾಗಿ ಮಾಡದೆ ಇರುವುದರಿಂದ ಅನೇಕ ಅಪಘಾತಗಳು ಆಗಿವೆ. ಅಲ್ಪಸ್ವಲ್ಪ ಮಳೆಯಾದರೂ ಸಾಕು ರೈತ ಸಂಪರ್ಕ ಕೇಂದ್ರದ ಬಳಿ ಒಂದು ದೊಡ್ಡ ಈಜುಗೊಳವೆ ನಿರ್ಮಾಣವಾಗುತ್ತಿದೆ. ಹೀಗೆ ನಿಂತ ನೀರಿನಿಂದ ಮೊದಲಿನ ರಸ್ತೆ ಮತ್ತು ಈಗಿನ ಹೊಸ ರಸ್ತೆಗಳೆರಡೂ ಕೆಟ್ಟು ಹೋಗುತ್ತವೆ ಎಂಬ ಆತಂಕ ಸಾರ್ವಜನಿಕರನ್ನು ಕಾಡುತ್ತಿದೆ.

ಜೋಡು ರಸ್ತೆ ಮಾಡಿರುವ ಗುತ್ತಿಗೆದಾರರು ಕಾಂಕ್ರೀಟ್ ರಸ್ತೆಯ ಎರಡು ಭಾಗವನ್ನು ಕಾಂಕ್ರೀಟ್‌ನಿಂದ ಜೋಡಿಸದೆ ಮಣ್ಣಿನಿಂದ ಜೋಡಿಸಿರುವದರಿಂದ ರಸ್ತೆ ಕುಸಿದು ಅನೇಕ ಬಾರಿ ವಾಹನ ಸವಾರರು, ಅದರಲ್ಲೂ ದ್ವಿಚಕ್ರ ವಾಹನ ಸವಾರರು ಪೆಟ್ಟು ತಿಂದ ಉದಾಹರಣೆಗಳಿವೆ. ಒಂದೆಡೆ ರಸ್ತೆ ಮಣ್ಣಿನಿಂದ ಉಬ್ಬು ಮಾಡಿದ್ದು ಅದೂ ಕೂಡ ವಾಹನ ಸವಾರರಿಗೆ ಕಂಟಕವಾಗಿದೆ. ಜೋಡು ರಸ್ತೆ ನಿರ್ಮಾಣದ ಸಮಯದಲ್ಲಿ ರಸ್ತೆಯುದ್ದಕ್ಕೂ ಬೀದಿದೀಪಗಳನ್ನು ಅಳವಡಿಸಲಾಗುತ್ತಿದೆ ಎಂದು ಹೇಳುತ್ತಲೆ ಬಂದರು. ಈಗ ಜೋಡಿಸಿದ್ದು ಬರಿ 22 ದೀಪಗಳನ್ನು. ಅರ್ಧಕ್ಕಿಂತಲೂ ಹೆಚ್ಚಿನ ಭಾಗ ಮತ್ತೆ ಕತ್ತಲಲ್ಲಿ ಇರುತ್ತಿದೆ. ಡಿವೈಡರ್ ಮಧ್ಯದಲ್ಲಿ ಮಣ್ಣು ಹಾಕಬೇಕಾದ ಕೆಲಸವೂ ಸ್ಥಗಿತಗೊಂಡಿದೆ. ಜನರು ತಮಾಷೆಯಾಗಿ ಇಲಾಖೆಯವರಿಗ ಸರಿಯಾಗಿ ಮಣ್ಣು ಕೊಡಲೂ ಬರುವುದಿಲ್ಲ ಎಂದು ಆಡಿಕೊಳ್ಳುತ್ತಿದ್ದಾರೆ. ರಸ್ತೆ ನಿರ್ಮಾಣಗೊಂಡು ತಿಂಗಳುಗಳೆ ಗತಿಸಿದರೂ ಡಿವೈಡರುಗಳ ಮಧ್ಯದಲ್ಲಿ ಇನ್ನೂ ಮಣ್ಣು ಹಾಕುವ ಕಾರ್ಯ ಪೂರ್ಣಗೊಂಡಿಲ್ಲ.

ಕಾಲೇಜಿನವರೆಗೆ ಇರುವ ಹಳೆಯ ಜೋಡು ರಸ್ತೆಯ ಮಧ್ಯದಲ್ಲಿ ಮುಳ್ಳು ಕಂಟಿಗಳು ಬೆಳೆದು ಬಹಳಷ್ಟು ಅಸಹ್ಯ ಕಾಣಿಸುತ್ತಿವೆ. ಇವರೇನು ಪಟ್ಟಣದ ಸೌಂದರ್ಯ ಹೆಚ್ಚಿಸುತ್ತಿದ್ದಾರೆಯೊ? ಅಥವಾ ಇದ್ದುದನ್ನು ಹಾಳು ಮಾಡುತ್ತಿದ್ದಾರೆಯೋ ಎಂಬ ಅನುಮಾನ ಜನರಿಗೆ ಬಲವಾಗಿ ಕಾಡುತ್ತಿದೆ. ಈ ರಸ್ತೆಯ ಸಮಸ್ಯೆಗಳ ಬಗ್ಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿದ್ದು, ಭರವಸೆ ನೀಡಿ ಕಳಿಸುತ್ತಾರೆ. ಶೀಘ್ರದಲ್ಲಿ ಎಲ್ಲ ಕೆಲಸ ಪೂರ್ಣಗೊಳಿಸದಿದ್ದರೆ ಹೋರಾಟ ಅನಿವಾರ್ಯ ಎಂದು ಸ್ಥಳೀಯ ಸಂಘಟನೆಗಳ ಮುಖಂಡರು ಎಚ್ಚರಿಕೆ ನೀಡಿದ್ದಾರೆ.


ನರೇಗಲ್ಲ ಕೋಡಿಕೊಪ್ಪದ ಕಾಲೇಜುವರೆಗಿನ ಜೋಡು ರಸ್ತೆಯ ಡಿವೈಡರ್‌ನಲ್ಲಿ ಗಿಡಗಂಟೆ, ಮುಳ್ಳುಕಂಟಿಗಳು ಬೆಳೆದಿರುವುದು. 2) ನರೇಗಲ್ಲನ ರೈತ ಸಂಪರ್ಕ ಕೇಂದ್ರದ ಬಳಿ ರಸ್ತೆ ಎತ್ತರವಾಗಿರುವದರಿಂದ ಮಳೆ ನೀರು ನಿಂತಿರುವುದು.

> “ಜೋಡು ರಸ್ತೆಯ ಮುಕ್ತಾಂಯದವರೆಗೂ ಬೀದಿದೀಪಗಳನ್ನು ಅಳವಡಿಸಬೇಕು. ನಮ್ಮ ತೆರಿಗೆ ಹಣ ಸಮರ್ಪಕವಾಗಿ ವಿನಿಯೋಗವಾಗುವಂತೆ ನರೇಗಲ್ ಪಟ್ಟಣ ಪಂಚಾಯಿತಿಯವರು ಕ್ರಮ ಕೈಗೊಳ್ಳಬೇಕು. ಅರ್ಧಂಬರ್ಧ ಕೆಲಸ ಮಾಡಿದರೆ ಹೋರಾಟ ಅನಿವಾರ್ಯವಾದೀತು.
>
> **■ ಪ್ರಕಾಶ ಪಲ್ಲೇದ ಕೋಡಿಕೊಪ್ಪ ನಿವಾಸಿ**

> “ಡಿವೈಡರ್ ಮಧ್ಯ ಮೋರ್‌ಂ ಹಾಕಲು ಗುತ್ತಿಗೆದಾರನಿಗೆ ಹೇಳಿದ್ದೇನೆ. ಹಾಗೆಯೆ ರಸ್ತೆಯಲ್ಲಿನ ಎಲ್ಲ ತೊಂದರೆ ಪರಿಹರಿಸಲು ಎಂಜಿನೀಯರ್ ಗಮನಕ್ಕೆ ತಂದಿದ್ದೇನೆ. ಬೇಗನೆ ಮಾಡಿಕೊಡುವುದಾಗಿ ಹೇಳಿದ್ದಾರೆ.
>
> **■ ಮಲ್ಲೇಶ ಪಚ್ಚಿ| ಮುಖ್ಯಾಧಿಕಾರಿ ಪ.ಪಂ ನರೇಗಲ್ಲ**

> “ಮೋರ್‌ಂ ಸಿಕ್ಕತಕ್ಷಣ ಡಿವೈಡರ್‌ಗಳಿಗೆ ತುಂಬಲಾಗುವುದು. ರಸ್ತೆಯ ನಡುವೆ ಇರುವ ತೊಂದರೆ ತಪ್ಪಿಸಿ, ಜನತೆಗೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು.
>
> **■ ಸಂತೋಷ ನೀಲಣ್ಣವರ, ಎಂಜಿನೀಯರ್ ಪಿಡಬ್ಲ್ಯೂಡಿ ರೋಣ**

ಚುಟುಕು ಸುದ್ದಿ

ಬುದ್ಧ ಜಯಂತಿ ಪೂರ್ವಭಾವಿ ಸಭೆ 22ರಂದು

ಗದಗ: ಸರ್ಕಾರದ ಆದೇಶದನ್ವಯ ಮೇ. 1ರಂದು ನಡೆಯುವ ಭಗವಾನ ಬುದ್ಧ ಜಯಂತಿ ಕಾರ್ಯಕ್ರಮದ ನಿಮಿತ್ತ ಏ. 22ರಂದು ಬೆಳಿಗ್ಗೆ 10:30ಕ್ಕೆ ಅಪರ ಜಿಲ್ಲಾಧಿಕಾರಿಗಳು ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸಭೆಗೆ ಸಲಹೆ, ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ರಸಗೊಬ್ಬರ ಕೃತಕ ಅಭಾವ ಸೃಷ್ಟಿಸಿದರೆ ಕ್ರಮ

ಗದಗ: ಜಿಲ್ಲೆಯಲ್ಲಿ ಇನ್ನೂ ಅಧಿಕೃತವಾಗಿ ಮಳೆಗಾಲ, ರೈತರು ಜಮೀನುಗಳ ಬಿತ್ತನೆ ಕಾರ್ಯ ಪ್ರಾರಂಭವಾಗಿಲ್ಲ. ಮುಂದೆ ದಿನಗಳಲ್ಲಿ ರಸಗೊಬ್ಬರ ಸಿಗುವುದಿಲ್ಲವೆಂದು ಎಂಬ ಸ್ವ–ಕಲ್ಪಿತ ಆತಂಕದಿಂದ ಮುಂಗಡವಾಗಿಯೇ ರಸಗೊಬ್ಬರ ಖರೀದಿಸಿ ತಮ್ಮ ಮನೆಗಳಲ್ಲಿ ದಾಸ್ತಾನಿಗೆ ಮುಂದಾಗಿದ್ದು, ರಸಗೊಬ್ಬರ ಮಾರಾಟಗಾರರು ಇದರ ಲಾಭ ಪಡೆದು ಕೃತಕ ಅಭಾವ ಸೃಷ್ಟಿಸಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಬೇಡಿಕೆ ಅನುಸಾರ ರಸಗೊಬ್ಬರಗಳ ಸರಬರಾಜಾಗುತ್ತಿದ್ದು, ರೈತರು ಯಾವುದೇ ಆತಂಕ ಪಡುವ ಅಗತ್ಯ ಇಲ್ಲ. ರೈತರು ಅವಧಿಗಿಂತ ಮುಂಚೆ ಅನಗತ್ಯ ಹಾಗೂ ಅಗತ್ಯ ಪ್ರಮಾಣಕ್ಕಿಂತ ಅಧಿಕವಾಗಿ ರಸಗೊಬ್ಬರಗಳ ಖರೀದಿ ಮತ್ತು ದಾಸ್ತಾನು ಮಾಡುವ ಅನಿವಾರ್ಯತೆ ಇಲ್ಲ. ನೈಜವಾಗಿ ಕೃಷಿ ಚಟುವಟಿಕೆಗಳು ಪ್ರಾರಂಭಗೊಂಡಾಗ ಭೂಮಿ ಪ್ರಮಾಣ, ಬೆಳೆಯ ವಿಧ, ಬೆಳವಣಿಗೆ ಹಂತ ಹಾಗೂ ಶಿಫಾರಸು ಪ್ರಮಾಣಗಳಿಗೆ ತಕ್ಕಂತೆ ರಸಗೊಬ್ಬರ ಖರೀದಿಸಿ ಎಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ರೈತರಲ್ಲಿ ಮನವಿ ಮಾಡಿದ್ದಾರೆ. ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ, ಅಧಿಕೃತ ಪರವಾನಿಗೆ ಪಡೆಯದೇ ಮಾರಾಟ ಕಂಡುಬಂದಲ್ಲಿ ಅಂತಹ ರಸಗೊಬ್ಬರ ಮಾರಾಟಗಾರರ ವಿರುದ್ಧ ರಸಗೊಬ್ಬರ ನಿಯಂತ್ರಣ ಕಾಯ್ದೆ (ಎಫ್‌ಸಿಓ) 1985ರಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕೃಷಿ ಪರಿಕರ ಮಾರಾಟಗಾರರು ರೈತರ ಜೊತೆ ಸಭ್ಯವಾಗಿ ವರ್ತಿಸಬೇಕು. ಪಿಓಎಸ್‌ಹಾಗೂ ಗೋದಾಮಿನ ಭೌತಿಕ ದಾಸ್ತಾನುಗಳೆರಡು ತಾಳೆ ಹೊಂದುವಂತೆ ಕ್ರಮ ಕೈಗೊಳ್ಳಲು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಅಕ್ರಮ ಗೋಮಾಂಸ ವಶ

ಧಾರವಾಡ: ಬೆಳಗಾವಿಯಿಂದ ಹುಬ್ಬಳ್ಳಿ ಕಡೆಗೆ ಸಾಗಿಸುತ್ತಿದ್ದ 5 ಟನ್ ಅಕ್ರಮ ಗೋಮಾಂಸದ ವಾಹನ ತಡೆದ ಬಜರಂಗ ದಳದ ಕಾರ್ಯಕರ್ತರು ಗ್ರಾಮೀಣ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಇಲ್ಲಿಯ ನರೇಂದ್ರ ಟೋಲ್ ಬಳಿ ವಾಹನ ತಡೆದ ಬಜರಂಗ ದಳದ ಕಾರ್ಯಕರ್ತರು ತಪಾಸಣೆ ಮಾಡಿದಾಗ ಅಕ್ರಮ ಗೋಮಾಂಸ ಇರುವುದು ಬೆಳಕಿಗೆ ಬಂದಿದೆ.

ಅಬ್ಬಿಗೇರಿಯಲ್ಲಿ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಅಬ್ಬಿಗೇರಿ ಆಶ್ರಯಲ್ಲಿ ಅನ್ನದಾನೇಶ್ವರ ಹೈಸ್ಕೂಲ್ ಮೈದಾನದಲ್ಲಿ ನಡೆದ ಅಬ್ಬಿಗೇರಿ ಪ್ರೀಮಿಯರ್ ಲೀಗ್–3. ಪಂದ್ಯ ಉದ್ಘಾಟಿಸಿದ ಕೆಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಐ.ಎಸ್ ಪಾಟೀಲ ಮಾತನಾಡಿದರು.

ಕ್ರೀಡೆಯಿಂದ ಸ್ನೇಹ, ಸಮಾನತೆ

ನರೇಗಲ್ಲ: ಕ್ರಿಕೆಟ್ ಒಂದು ಆಟವಲ್ಲ, ಅದು ನಮ್ಮಲ್ಲಿ ತಂಡದ ಮನೋಭಾವ, ಶಿಸ್ತು, ಸೋಲು–ಗೆಲುವು ಸಮಾನವಾಗಿ ಸ್ವೀಕರಿಸುವ ಗುಣ ಬೆಳೆಸುತ್ತದೆ ಎಂದು ಕೆ.ಸಿ.ಸಿ. ಬ್ಯಾಂಕ ಮಾಜಿ ಅಧ್ಯಕ್ಷರಾದ ಐ.ಎಸ್ ಪಾಟೀಲ ಹೇಳಿದರು.

ಸಮೀಪದ ಅಬ್ಬಿಗೇರಿಯಲ್ಲಿ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಅಬ್ಬಿಗೇರಿ ಆಶ್ರಯಲ್ಲಿ ಅನ್ನದಾನೇಶ್ವರ ಹೈಸ್ಕೂಲ್ ಮೈದಾನದಲ್ಲಿ ನಡೆದ ಅಬ್ಬಿಗೇರಿ ಪ್ರೀಮಿಯರ್ ಲೀಗ್–3 ಪಂದ್ಯ ಉದ್ಘಾಟಿಸಿ ಮಾತನಾಡಿದ ಅವರು, ಅಬ್ಬಿಗೇರಿ ಯಂತಹ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಇಂತಹ ಟೂರ್ನಾಮೆಂಟ್‌ಗಳು ವೇದಿಕ 'ಯಾಗಲಿವೆ. ಯುವಕರು ಈ ಅವಕಾಶ ಸದುಪಯೋಗಪಡಿಸಿಕೊಂಡು, ಕ್ರೀಡಾ ಸ್ಫೂರ್ತಿಯಿಂದ ಆಡಬೇಕು. ಗೆಲುವು–ಸೋಲಿಗಿಂತ ಹೆಚ್ಚಾಗಿ, ಸ್ನೇಹ ಮತ್ತು ಒಗ್ಗಟ್ಟು ಮುಖ್ಯ ಎಂದರು.

ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಅಂದಪ್ಪ ನೀರಲೋಟಿ ಮಾತನಾಡಿ, ಪ್ರತಿಯೊಬ್ಬ ಆಟಗಾರನು ಎದುರಾಳಿ ತಂಡ ಗೌರವಿಸುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಇಂದು ಅಬ್ಬಿಗೇರಿಯಲ್ಲಿ ಆರಂಭವಾಗಿರುವ ಈ ಕ್ರೀಡಾ ಹಬ್ಬವು ರಾಜ್ಯ ಮಟ್ಟದ ಕ್ರೀಡಾಪಟುಗಳನ್ನು ಹುಟ್ಟುಹಾಕುವಂತಾಗಲಿ ಎಂದರು.

ಈ ವೇಳೆ ಪಂದ್ಯ ವೀಕ್ಷಿಸಲು ಕ್ರೀಡಾಭಿಮಾನಿಗಳು ಮತ್ತು ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದು, ಮೈದಾನ ಕ್ರೀಡಾ ಸಂಭ್ರಮಕ್ಕೆ ಸಾಕ್ಷಿಯಾಯಿತು. ಬಸವರಾಜ ಪಲ್ಲೇದ, ಬಸವರಾಜ ತಳವಾರ, ಸುರೇಶ ಶಿರೋಳ, ಎಚ್.ಟಿ. ದ್ವಾಸಲ, ರಾಜು ಅವರದ್ದಿ, ಆನಂದ ಹಿರೇಮನಿ, ಸೋಮು ಶಿರೋಳ, ಕುಮಾರ ಬಸವರಡ್ಡೇರ, ಶರತ ಮಡಿವಾಳರ, ರಾಕೇಶ ಪಾಟೀಲ, ಸುನೀಲ ಸೊಲಗಿ, ಬಸವರಾಜ ತಾಳಿಕೋಟಿ, ಅಶೋಕ ತೋಟಗಂಟಿ, ಎಲ್ಲ ತಂಡಗಳ ಮಾಲಕರು, ನಾಯಕರು, ಕ್ರೀಡಾಪಟುಗಳು, ದಾನಿಗಳು ಇದ್ದರು.

ಬಸವ ಜಯಂತಿ; ರಜೆ ರಹಿತ ಕಾಯಕ ನಿರ್ವಹಣೆಗೆ ಆಗ್ರಹ



ನರಗುಂದ: ಹನ್ನೆರಡನೇ ಶತಮಾನದ ಸಮಾಜ ಸುಧಾರಕರು, ಮೇಲು, ಕೀಳು, ಜಾತಿ, ಧರ್ಮ, ಮಡಿಮೈಲಿಗೆ ತುಂಬಿದ್ದ ಸಮಯದಲ್ಲಿ ನೊಂದವರ ಉದ್ಧಾರಕ್ಕೆ ಬಸವಣ್ಣರರು ಶ್ರಮಿಸಿದ್ದು, ಬಸವ ಜಯಂತಿ ರಜೆ ರಹಿತ ದಿನವನ್ನಾಗಿ ಆಚರಣೆ ಮಾಡಬೇಕು ಎಂದು ಜೆಡಿಎಸ್ ಮುಖಂಡ ಸಿ.ಎಸ್.ಪಾಟೀಲ ಆಗ್ರಹಿಸಿದ್ದಾರೆ.

ಮೇಲವರ್ಗವರು ಕೆಳವರ್ಗದವರನ್ನು ಅತ್ಯಂತ ಹೀನಾಯವಾಗಿ ಕಾಣುತ್ತಿದ್ದ ಅನ್ಯಾಯ ಹೋಗಲಾಡಿಸಲು ಬಸವಣ್ಣವರು ಕಲ್ಯಾಣದಲ್ಲಿ ಕ್ರಾಂತಿಯ ಬೀಜ ಬಿತ್ತಿದರು. ಬಿಜ್ಜಳ ರಾಜನನ ಅಂಧಶ್ರದ್ಧೆ ವಿರುದ್ಧ ಸಿಡಿದು ನಿಂತು ಅನುಭವ ಮಂಟಪ ನಿರ್ಮಿಸಿದರು. ಅದರಡಿ ಎಲ್ಲ ವರ್ಗದವರನ್ನು ಬರ ಮಾಡಿಕೊಂಡು ಕಾಯಕವೇ ಕೈಲಾಸ ಎಂದು ಸಾರಿ ಪ್ರತಿಯೊಬ್ಬರಲ್ಲೂ ದುಡಿದು ತಿನ್ನುವ ಹುಮ್ಮಸ್ಸು ತುಂಬಿದರು. ಎಲ್ಲರಲ್ಲೂ ಸಮಾನತೆ, ಸಹೋದರತ್ವ ಸಂದೇಶ ಸಾರಿದ ಬಸವಣ್ಣನವರು ಯಾವದೇ ಒಂದು ಜಾತಿ, ಧರ್ಮಕ್ಕೆ ಸೀಮಿತವಲ್ಲ. ಕಾಯಕವೇ ಕೈಲಾಸ ಎಂದು ಸಾರಿದ ಬಸವಣ್ಣನವರ ಜಯಂತಿ ದಿನ ರಜೆ ರದ್ದು ಪಡಿಸಿ ಕರ್ತವ್ಯ ನಿರ್ವಹಣೆ ಮೂಲಕ ಬಸವ ಜಯಂತಿ ಇನ್ನಷ್ಟು ಅರ್ಥಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಗದುಗಿನಲ್ಲಿ ಬಸವ ಜಯಂತಿ

ಗದಗ: ಜಗಜ್ಯೋತಿ ಬಸವೇಶ್ವರ ಜಯಂತಿ ಏಪ್ರಿಲ್ 20ರಂದು ಆಚರಿಸಲಾಗುತ್ತಿದ್ದು, ಅಂದು ಬೆಳಿಗ್ಗೆ 8ಕ್ಕೆ ನಗರದ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದಿಂದ ಮೆರವಣಿಗೆ ಕಾರ್ಯಕ್ರಮ ಜರುಗಲಿದೆ.

ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ, ತ್ರಿವಿಧ ದಾಸೋಹಿ ಜ. ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಎಲ್ಲ ಜನಪ್ರತಿನಿಧಿಗಳು ಅಧಿಕಾರಿಗಳು ಪಾಲಗೊಳ್ಳಲಿದ್ದು, ಮೆರವಣಿಗೆಯು ಟಾಂಗಾಕೂಟ ಮಾರ್ಗವಾಗಿ, ಬಸವೇಶ್ವರ ವೃತ್ತ, ಕೆ.ಎಚ್.ಪಾಟೀಲ ವೃತ್ತ, ರೋಟರಿ ವೃತ್ತ, ಗಾಂಧಿ ವೃತ್ತ ಮಾರ್ಗವಾಗಿ ಜ. ತೋಂಟದಾರ್ಯ ಮಠ ತಲುಪಲಿದೆ. ಬೆಳಿಗ್ಗೆ 11ಕ್ಕೆ ನಗರದ ಜಿಲ್ಲಾಡಳಿತ ಭವನದಲ್ಲಿ ಜಯಂತಿಯ ವೇದಿಕೆ ಕಾರ್ಯಕ್ರಮ ಜರುಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ನರೇಗಲ್ಲ..

ನರೇಗಲ್: ಪಟ್ಟಣದ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಏ.20ರಂದು ಬೆಳಿಗ್ಗೆ 10:30ಕ್ಕೆ ಗಜೇಂದ್ರಗಡ ರಸ್ತೆಯಲ್ಲಿರುವ ಶ್ರೀ ಬಸವೇಶ್ವರ ಇಂಜಿನೀಯರಿಂಗ್ ವರ್ಕ್ಸ್‌ನಲ್ಲಿ ಬಸವ ಜಯಂತಿ ಆಚರಣೆ ನಡೆಯಲಿದೆ. ಸಂಘದ ಅಧ್ಯಕ್ಷ ಶಿವಯೋಗಿ ಜಕ್ಕಲಿ ಅಧ್ಯಕ್ಷತೆ ವಹಿಸಲಿದ್ದು, ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಸವಿತಕ್ಕ ಮುಖ್ಯ ಅತಿಥಿಗಳಾ ಪಾಲ್ಗೊಳ್ಳುವರು. ಎಸ್‌ಎವಿ ಬಾಲಿಕೆಯರ ಪ್ರೌಢಶಾಲೆಯ ಮುಖ್ಯಶಿಕ್ಷಕ ಸಂಗಮೇಶ ಹೂಲಗೇರಿ ಉಪನ್ಯಾಸ ನೀಡುವರು. ಬಣಜಿಗ ಸಮಾಜದ ಹಿರಿಯರಾದ ಸಿ.ವಿ.ವಂಕಲಕುಂಟಿ, ಸಂಘದ ಗೌರವಾಧ್ಯಕ್ಷ ಗುರುಪಾದಪ್ಪ ಬೆಲ್ಲದ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಂಗೀತ ಶಿಕ್ಷಕಿ ಗೀತಾ ಭೋಪಳಾಪೂರ ಸಂಗೀತ ಸೇವೆ ನೀಡಲಿದ್ದಾರೆ ಎಂದು ಬಣಜಿಗ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ.

ಭ್ರಷ್ಟಾಚಾರ; ಜನತೆ ಧೈರ್ಯದಿಂದ ದೂರು ನೀಡಲಿ

ರಾಮಗಿರಿ ಗ್ರಾಮದಲ್ಲಿ ನಡೆದ ಲೋಕಾಯುಕ್ತರ ಜನಸಂಪರ್ಕ ಸಭೆ, ಸಾರ್ವಜನಿಕರ ಅರ್ಜಿ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಲೋಕಾಯುಕ್ತ ಅಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಲಕ್ಷ್ಮೇಶ್ವರ: ಸಮೀಪದ ರಾಮಗಿರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಲೋಕಾಯುಕ್ತ ಜನಸಂಪರ್ಕ ಸಭೆ ಮತ್ತು ಸಾರ್ವಜನಿಕ ಅರ್ಜಿ ಅಹವಾಲು ಸ್ವೀಕಾರ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಲೋಕಾಯುಕ್ತ ಇನ್‌ಸ್ಪೆಕ್ಟರ್ ಪರಮೇಶ್ವರ ಕವಟಗಿ ಮಾತನಾಡಿ, ಅಧಿಕಾರಿಗಳು ಜನರ ಕೆಲಸ ಸರಿಯಾದ ಸಮಯಕ್ಕೆ ಮಾಡಿ ಕೊಡಬೇಕು, ಎಲ್ಲೇಡೆ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತವೆ, ಭ್ರಷ್ಟಾಚಾರ ನಡೆಯುತ್ತಿದ್ದರೆ ಜನರು ಧೈರ್ಯದಿಂದ ಮುಂದೆ ಬಂದು ದೂರು ನೀಡಲು ಮುಂದಾಗಬೇಕು. ಅಂಗಾದ ಮಾತ್ರ ಭ್ರಷ್ಟಾಚಾರ ತಡೆಯಲು ಜನರ ಸಹಕಾರ ಅವಶ್ಯಕ ಎಂದರು.

ಅರಿವು ಗ್ರಂಥಾಲಯಗಳು ವಿದ್ಯಾರ್ಥಿಗಳಿಗೆ ಉಪಯೋಗವಾಗಬೇಕು, ಅಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಹಾಯಕವಾಗುವ ಪುಸ್ತಕಗಳು ದೊರೆಯುವಂತೆ ಮಾಡಿ ಎಂದು ಗ್ರಾಮದ ಗ್ರಂಥಾಲಯ ಮೇಲ್ವಿಚಾರಕರು ತಿಳಿಸಿದರು.

ಸರಕಾರದಿಂದ ಬರುವ ಪರಿಹಾರಗಳನ್ನು ಅಧಿಕಾರಿಗಳು ಸರಿಯಾಗಿ ರೈತರಿಗೆ ಮುಟ್ಟಿಸಬೇಕು. ಭ್ರಷ್ಟಾಚಾರ ತಡೆಯಲು ಸರಕಾರಿ ಕಚೇರಿಗಳಲ್ಲಿ ಜನರು ಆನ್‌ಲೈನ್‌ನಲ್ಲಿ ವ್ಯವಹರಿಸಿ ಎಂದರು.

ಅಂಗನವಾಡಿ ಕೇಂದ್ರ ಸುತ್ತಲೂ ಸಸಿ ನೆಡಲು ಅನುದಾನವಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸದುಪಯೋಗ ಪಡೆದುಕೊಂಡು ಸಸಿ ನೆಡಲು ಮುಂದಾಗಿ, ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಅವಧಿ ಮೀರಿದ ಆಹಾರ ಪದಾರ್ಥಗಳು, ಕಂಡು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು, ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ಪಡಿಸಿದ ಊಟ ನೀಡಬೇಕು ಎಂದು ಗ್ರಾಮದ ಆಡಳಿತ ಅಧಿಕಾರಿ ಹಾಗೂ ಸಿಡಿಪಿಓ ಆಗಿರುವ ಮೃತ್ಯುಂಜಯ ಜಿ. ಅವರಿಗೆ ಸೂಚಿಸಿದರು,

ಆಯುಷ್ಮಾನ ಭಾರತ ಕಾರ್ಡ್ ಮಾಡಿಸುವ ನಿಟ್ಟಿನಲ್ಲಿ ಜನರಿಗೆ ಮಾಹಿತಿ ನೀಡಿ ಕಾರ್ಡ್ ಮಾಡಿಸಲಾರದವರಿಗೆ ತಿಳುವಳಿಕೆ ನೀಡಿ ಕಾರ್ಡ್ ಮಾಡುವಲ್ಲಿ ವಿಶೇಷ ಕಾಳಜಿ ವಹಿಸಿ ಎಂದು ಅರೋಗ್ಯ ಇಲಾಖೆಯರಿಗೆ ತಿಳಿಸಿದರು.

ಅರಣ್ಯ ಇಲಾಖೆಯವರಿಗೆ ಸಸಿಗಳ ಸಂಗ್ರಹ, ಅವುಗಳನ್ನುಬೆಳೆಸುವಕಾರ್ಯಪ್ರಾರಂಭವಾಗುವದು ಹಾಗೂ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಹಾಸ್ಟೆಲ್‌ನಲ್ಲಿರುವ ಸಮಸ್ಯೆಗಳ ಕುರಿತು ಹಾಗೂ ಹೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ಬೇಸಿಗೆ ಕಾಲದಲ್ಲಿ ವಿದ್ಯುತ್ ಸಮಸ್ಯೆ ಆಗದಂತೆ ನಿಗಾವಹಿಸಿ ಎಂದು ಸೂಚಿಸಿದರು.

ಸಭೆಗೆ ಗ್ರಾಮ ಹಾಗೂ ಸುತ್ತಲಿನ ಊರುಗಳಿಂದ ಜನರು ಆಗಮಿಸಿದ್ದರು, ಅಲ್ಲದೆ ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು. ಈ ವೇಳೆ ಹಿರಿಯರಾದ ಬಸಣ್ಣ ಬೆಟಗೇರಿ, ಗ್ರಾ.ಪಂ ಆಡಳಿತ ಅಧಿಕಾರಿ ಮೃತ್ಯುಂಜಯ ಗುಡ್ಡದಅನ್ವೇರಿ, ಪಿಎಸ್‌ಐ ನಾಗರಾಜ ಗಡದ, ಕೃಷಿ ಅಧಿಕಾರಿ ಚಂದ್ರಶೇಖರ ನರಸಮ್ಮನವರ, ಪಿಡಿಓ ತನುಜಾ ಬೆನಕಟ್ಟಿ, ಗ್ರಾ.ಪಂ ಕಾರ್ಯದರ್ಶಿ ಎಂ.ಎಚ್.ನದಾಫ್, ಇಸಿಓ ರಾಘವೇಂದ್ರ ಜೋಶಿ, ಕಂದಾಯ ಇಲಾಖೆ ನದಾಫ್, ಹೆಸ್ಕಾಂ ಇಲಾಖೆಯ ಕಿರಣ ಪಮ್ಮಾರ, ರಘುಪತಿ ನಾಯಕ, ಅರಣ್ಯ, ಸಮಾಜ ಕಲ್ಯಾಣ, ಪೊಲೀಸ್ ಇಲಾಖೆಯ, ಅನೇಕ ಇಲಾಖೆಯ ಅಧಿಕಾರಿಗಳು ಗ್ರಾಮಸ್ಥರು ಇದ್ದರು.

ಯುವ ಮುಖಂಡ ಬಸವರಾಜ ಬೆಟಗೇರಿ, ಆರೋಗ್ಯ ಇಲಾಖೆಯವರು ಗ್ರಾಮದಲ್ಲಿ ವಾಸ್ತವ್ಯ ಇರುವುದಿಲ್ಲ. ಇದರಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು, ಜಾನುವಾರಗಳಿಗೆ ಕುಡಿಯಲು ನೀರಿನ ತೊಟ್ಟಿ ನಿರ್ಮಿಸುವದಕ್ಕೆ ಹಾಗೂ ಶುದ್ಧನೀರಿನ ಘಟಕವಿಲ್ಲ ಎಂದು ನಿವಾಸಿಗಳು ಅಧಿಕಾರಿಗಳಿಗೆ ತಿಳಿಸಿದರು. ಗ್ರಾಮದ ನಿವಾಸಿ ಅಶೋಕ ಬೆಟಗೇರಿ ತಮ್ಮ ಮನೆಯು ಗ್ರಾಮದ ಕೊನೆಯ ಭಾಗದಲ್ಲಿ ಇದ್ದು, ಗ್ರಾಮದ ಎಲ್ಲಾ ಕಡೆಯಿಂದ ಚರಂಡಿಯ ಗಲೀಜು ನೀರು ಬಂದು ಮನೆ ಹತ್ತಿರ ನಿಲ್ಲುತ್ತಿದ್ದು ಆ ಸಮಸ್ಯೆ ಸರಿಪಡಿಸಿ ಎಂದು ಮನವಿ ಸಲ್ಲಿಸಿದರು. ಗ್ರಾಮದ ಹಿರಿಯ ಮುಖಂಡ ಶೇಕಣ್ಣ ಕಾಳೆ ಮೌಖಿಕವಾಗಿ ತಹಶೀಲ್ದಾರ ಕಚೇರಿಯಲ್ಲಿ ವಾರಸಾ ಹಾಗೂ ಬೋನೋ ಪ್ಯಾಡ್ ಕೊಡಲು ಸತಾಯಿಸುತ್ತಾರೆ ಎಂದು ಲೋಕಾಯುಕ್ತ ಅಧಿಕಾರಿಗಳ ಮುಂದೆ ಅಳಲು ತೋಡಿಕೊಂಡರು.

ಬಾಲ್ಯವಿವಾಹ, ಫೋಕ್ಸೋ ತಡೆಗೆ ಸೂಚನೆ

ಹಾವೇರಿ: ಜಿಲ್ಲೆಯಲ್ಲಿ ಬಾಲ್ಯವಿವಾಹ ಹಾಗೂ ಫೋಕ್ಸೋ ಪ್ರಕರಣ ತಡೆಗೆ ಎಲ್ಲರೂ ತಂಡವಾಗಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಜೊತೆಗೆ ಬಾಲ್ಯ ವಿವಾಹ ನಿಷೇಧ ಕಾಯ್ದೆ ಹಾಗೂ ಫೋಕ್ಸೋ ಕಾಯ್ದೆಗಳ ಶಿಕ್ಷೆ ಕುರಿತು ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಸೂಚಿಸಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ 2025–26ನೇ ಸಾಲಿನ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಸಭೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ ಪ್ರಗತಿ ಪರಿಶೀಲನಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿವಾಹಗಳು ತುರ್ತಾಗಿ ನಡೆಯುವುದಿಲ್ಲ, ಪೂರ್ವ ನಿಯೋಜಿತವಾಗಿರುತ್ತವೆ. ಹಾಗಾಗಿ ಗ್ರಾಮೀಣ ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಪಿಡಿಓ, ಗ್ರಾಮ ಲೆಕ್ಕಾಧಿಕಾರಿ, ಶಾಲಾ ಮುಖ್ಯ ಶಿಕ್ಷಕರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಬಾಲ್ಯ ವಿವಾಹಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕು ಎಂದರು.

ಪರಿಹಾರ ಸಿಗದ್ದಕ್ಕೆ ಕಂಬ ಏರಿದ ರೈತ

ಯಲಬುರ್ಗಾ: ಪವರ್ ಗ್ರಿಡ್ ಕಂಪನಿಯಿಂದ ಯಾವುದೇ ಪರಿಹಾರ ಸಿಗದ ಹಿನ್ನೆಲೆಯಲ್ಲಿ ರೈತನೋರ್ವ ಪವರ್ ಗ್ರಿಡ್ ಕಂಬ ಏರಿಕುಳಿತ ಘಟನೆ ತಾಲೂಕಿನ ಹುನಸಿಹಾಳ ಗ್ರಾಮದಲ್ಲಿ ನಡೆದಿದೆ.

ಪವರ ಗ್ರಿಡ್ ಟ್ರಾನ್ಸ್‌ಮಿಷನ್ ಕಂಪನಿ ಲೈನ್ ಎಳೆಯುವ ಸಂದರ್ಭದಲ್ಲಿ ಜಮೀನಿಗೆ ಬಂದ ರೈತ ನಾಗಪ್ಪ ಗೊಂದಿ, ಹೊಲದಲ್ಲಿ ಬೆಳೆ ಇದೆ, ಬೆಳೆ ತೆಗೆದುಕೊಂಡ ನಂತರ ಕೆಲಸ ಆರಂಭಿಸಿ ಹಾಗೂ ಪರಿಹಾರ ಕೊಡಿ ಎಂದು ಆಗ್ರಹಿಸಿ ಕಂಬ ಏರಿ ಕುಳಿತಿದ್ದಾರೆ. ಕೆಲಸ ಆರಂಭಿಸಿ, ಹೊಲದಲ್ಲಿನ ಬೆಳೆ ಹಾಳು ಮಾಡಿದ್ದೂ ಅಲ್ಲದೇ ದೌರ್ಜನ್ಯ ಎಸಗಿರುವುದನ್ನು ರೈತ ಖಂಡಿಸಿದ್ದಾರೆ. ಮಾಧ್ಯಮದವರಿಗೆ ರೈತ ಕರೆ ಮಾಡಿ ಮಾಹಿತಿ ನೀಡಿದ್ದಾರೆ.

ಸೂಕ್ತ ಪರಿಹಾರ ನೀಡುವವರೆಗೂ ಯಾವುದೇ ರೀತಿ ಕಾಮಗಾರಿ ಮಾಡಬಾರದು ಎಂದು ಒತ್ತಾಯಿಸಿದ್ದಾರೆ.

‘ನೀರಿನ ಪೈಪ್‌ಲೈನ್ ಒಡೆದರೂ ಜಾಣಕುರುಡು’

ಶಿಗ್ಗಾಂವಿ(ಗ್ರಾಮೀಣ): ಕುಡಿಯುವ ನೀರು ಗ್ರಾಮದ ನಳಗಳಿಗೆ ಪೂರೈಸಲು ಮುಂದಾಗಬೇಕು. ರೈತರ ಕೊಳವೆಬಾವಿ ಬಾಡಿಗೆಯಲ್ಲಿ ತೆಗೆದುಕೊಂಡು ಪೂರೈಸಬೇಕು ಎಂದು ರಾಜ್ಯದ ಉನ್ನತ ಅಧಿಕಾರಿಗಳು, ಆಡಳಿತ ಸರಕಾರವು ಜಿಲ್ಲಾ ಆಡಳಿತವು ತಾಲೂಕಾ ಆಡಳಿತವು ಮನವರಿಕೆ, ಸುತ್ತೋಲೆ ಕಳಿಸುತ್ತಿದ್ದರೂ ಇದ್ದ ನೀರಿನ ಪೈಪ್‌ಲೈನ್ ಒಡೆದರೂ ನೋಡದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು ಎಂದು ಸಾರ್ವಜನಿಕರ ಆಗ್ರಹಿಸಿದ್ದಾರೆ.

ತಾಲೂಕಿನ ಕುನ್ನೂರ ಗ್ರಾಮದ ಕುನಗಾದೇವಿ ದೇವಸ್ಥಾನದ ಹತ್ತಿರವಿರುವ ಕುಡಿಯುವ ನೀರಿನ ಟ್ಯಾಂಕರ್‌ಗಳಿಂದ ಗ್ರಾಮಕ್ಕೆ ನೀರು ಸಂಪರ್ಕವಿರುವ ಪೈಪ್ ಒಡೆದು 2 ತಿಂಗಳು ಕಳೆದರೂ ಪಂಚಾಯತಿ ಅಧಿಕಾರಿಗಳುಗಮನ ಹರಿಸದ ಕಾರಣ ಸ್ಥಳೀಯರು ಆಕ್ರೋಶಗೊಂಡಿದ್ದು, ಉರಿ ಬಿಸಿಲಿನಲ್ಲಿ ನೀರು ಸಿಗದೇ ಜನರಿಗೆ ಆಹಾಕಾರವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡ
ಪ್ರಾದೇಶಿಕ ಕಛೇರಿ ಒತ್ತಡಕ್ಕೊಳಪಟ್ಟ ಸ್ವತ್ತುಗಳ ರಿಕವರಿ ಶಾಖೆ, ಹುಬ್ಬಳ್ಳಿ
2ನೇ ಮಹಡಿ, ಬೆಲ್ಲದ ಟವರ್ಸ್, ಬನ್ನಿಗಿಡ ಸ್ಟಾಪ್, ಗೋಕಲ ರಸ್ತೆ,
ಹುಬ್ಬಳ್ಳಿ–580030, ಕರ್ನಾಟಕ
ಇ–ಮೇಲ್: sarhub@bankofbaroda.com

ಇ–ಹರಾಜು ಮಾರಾಟ ಸೂಚನೆ

[ಅನುಬಂಧ–II ಎ ನಿಯಮ 6(2)ರೊಂದಿಗೆ ಚರಾಸ್ತಿಗಾಗಿ] [ಅನುಬಂಧ–IV–ಎ ಸ್ಥಿರಾಸ್ತಿಗಾಗಿ 8(6)ರ ನೊಬಂಧನೆಯನ್ನು ಉಲ್ಲೇಖಿಸಿ]

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ–ಹರಾಜು.

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಛಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ–ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ :–

ಕ್ರ ಸಂ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲಕರು ಹೆಸರು ಮತ್ತು ವಿಳಾಸ	ಚರಾಸ್ತಿ/ಸ್ಥಿರಾಸ್ತಿ ಯ ವಿವರ: (ಅಧಿಕೃತ ಅಧಿಕಾರಿಗಳ ತಿಳುವಳಿಕೆ ಮೇರಗೆ ಆಸ್ತಿಯ ಮೇಲೆ ಬೇರೆ ಯಾವುದೇ ಋಣಭಾರ	ಒಟ್ಟು ಬಾಕಿ ದಿ.12.04.2026 ರಂದು	ಇ–ಹರಾಜಿ ದಿನಾಂಕ ಸಮಯ: ಬಿಡ್ (ಹರಾಜು ಕೂಗುವ) ಸಮಯ	ಆಸ್ತಿಯ ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ (ರೂ)	ಆಸ್ತಿಯ ಸ್ವರೂಪ (ಸಾಂಕೇತಿಕ/ ಭೌತಿಕ)	ಆಸ್ತಿ ಪರಿಶಿಲನೆ ದಿನಾಂಕ ಮತ್ತು ಸಮಯ
1	ಶ್ರೀಮತಿ ಐಶ್ವರ್ಯ ಹರೀಶ್ ಭಾಂಡಗೆ, ಪತಿ: ಹರೀಶ್ ಭಾಂಡಗೆ, ಮನೆ ನಂ. 2087, ಸೋಮೇಶ್ವರ ರಸ್ತೆ, ಹಳೆಯ ಸಫರ್ ಬಜಾರ್, ಗದಗ, ಗದಗ ಜಿಲ್ಲೆ, ಕರ್ನಾಟಕ – 582101. ಅಸ್ತಿಯ ಜಿಪಿಎಸ್ ನಿರ್ದೇಶಾಂಕಗಳು: 15.413493, 75.582301.	ಗದಗ ತಾಲೂಕು ಮತ್ತು ಜಿಲ್ಲೆಯ ಅಸುಂಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಸುಂಡಿ ಗ್ರಾಮದ ಭಾವಿಕಟ್ಟಿ ಪ್ಲಾಟ್ಸ್‌ನಲ್ಲಿರುವ, ಆರ್.ಎಸ್.ನಂ. 59ಸಿ ರಲ್ಲಿನ ಕೃಷಿಯೇತರ ವಸ್ತಿ ಪ್ಲಾಟ್ ನಂ. 39 ರಲ್ಲಿನ ಒಟ್ಟು ವಿಸ್ತೀರ್ಣ ಪೂರ್ವ–ಪಶ್ಚಿಮ: 9 ಮೀ., ಉತ್ತರ–ದಕ್ಷಿಣ: 12 ಮೀ, ಒಟ್ಟು 108 ಚದರ ಮೀಟರ್ ಜಮೀನು ಮತ್ತು ಅದರಲ್ಲಿರುವ ನಂ. 151400100300120145 ರ ಒಟ್ಟು 64.26 ಚದರ ಮೀಟರ್ ವಿಸ್ತೀರ್ಣದ ಆರ್.ಸಿ.ಸಿ. ವಸ್ತಿ ಮನೆಯ ಪೂರ್ಣ ಸ್ವತ್ತು ಮತ್ತು ಅದರ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಪ್ಲಾಟ್ ನಂ. 40 ಉತ್ತರಕ್ಕೆ: ಪ್ಲಾಟ್ ನಂ. 38, ದಕ್ಷಿಣಕ್ಕೆ: ರಸ್ತೆ	ರೂ. 38,08,432.72 (ಮೂವತ್ತೆಂಟು ಲಕ್ಷದ ಎಂಟು ಸಾವಿರದ ನಾಲ್ಕುನೂರ ಮೂವತ್ತೆರಡು ರೂಪಾಯಿ ಮತ್ತು ಎಪ್ಪತ್ತೆರಡು ಪೈಸೆ ಮಾತ್ರ) ಮತ್ತು ಅದರ ಮೇಲಿನ ಬಡ್ಡಿ ಹಾಗೂ ಖರ್ಚುಗಳು.	ಇ–ಹರಾಜಿನ ದಿನಾಂಕ: 20ನೇ ಮೇ 2026 ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 04:00 ಗಂಟೆಯವರೆಗೆ ಬಿಡ್ (ಹರಾಜು ಕೂಗುವ) ಸಮಯ: 20ನೇ ಮೇ 2026ರ ಬೆಳಿಗ್ಗೆ 10:00 ರಿಂದ ಸಂಜೆ 04:00 ಗಂಟೆಯವರೆಗೆ	1. ರೂ. 20,93,000.00/– (ಇಪ್ಪತ್ತು ಲಕ್ಷದ ತೊಂಬತ್ತುಮೂರು ಸಾವಿರ ರೂಪಾಯಿ ಮಾತ್ರ) 2. ರೂ. 2,09,300.00/– (ಎರಡು ಲಕ್ಷದ ಒಂಬತ್ತು ಸಾವಿರದ ಮೂರುನೂರ ರೂಪಾಯಿ ಮಾತ್ರ) (ಇ.ಎಂ.ಡಿ. ಮೊತ್ತವನ್ನು 20ನೇ ಮೇ 2026 ರಂದು ಅಥವಾ ಅದಕ್ಕಿಂತ ಮೊದಲು ಸಂಜೆ 03:00 ಗಂಟೆಯ ಒಳಗಾಗಿ ಜಮಾ ಮಾಡತಕ್ಕದ್ದು.) 3. ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ : ರೂ.25,000.00 (ಇಪ್ಪತ್ತೈದು ಸಾವಿರ ರೂಪಾಯಿ ಮಾತ್ರ)	ಭೌತಿಕ ಸ್ವಾಧೀನ	20.04.2026 ರಿಂದ 19.05.2026 ಬೆಳಿಗ್ಗೆ 11.00ರಿಂದ ಸಂಜೆ 4.00 ಗಂಟೆಯವರೆಗೆ (ರಜಾದಿನಗಳನು ಹೊರತುಪಡಿಸಿ)

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction ಹಾಗೂ baankent.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ **9482397247**ಗೂ ಸಹ ಕರೆ ಮಾಡಬಹುದು.

ದಿನಾಂಕ:17.04.2026
ಸ್ಥಳ:ಹುಬ್ಬಳ್ಳಿ

ಸಹಿ/-ಮುಖ್ಯ ವ್ಯವಸ್ಥಾಪಕರು & ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಮಕ್ಕಳಿಲ್ಲದ ದಂಪತಿಗಳಿಗೆ ಸುವರ್ಣಾವಕಾಶ
ಉಚಿತ ಬಂಜೆತನ ನಿವಾರಣೆ ಮತ್ತು ಸ್ತ್ರೀ ರೋಗ ಉಪಚಾರ ಶಿಬಿರ
ರವಿವಾರ 26-04-2026 ಬೆ. 9 ರಿಂದ ಸಂ. 4 ರ ವರೆಗೆ
• ಅವಶ್ಯಕತೆಗನುಸಾರ ಉಚಿತ ಮಾರ್ಗದರ್ಶನ • ಭಾಗವಹಿಸುವ ರೋಗಿಗಳಿಗೆ ಅತೀ ಕಡಿಮೆ ದರದಲ್ಲಿ ತಜ್ಞ ರಾಷ್ಟ್ರೀಯ-ಅಂತರಾಷ್ಟ್ರೀಯ ವೈದ್ಯರಿಂದ ತಪಾಸನೆ, ಉಪಚಾರ ಮತ್ತು ಶಸ್ತ್ರಕ್ರಿಯೆ • ಐಯುಐ ಮತ್ತು ಟೆಸ್ಟ್‌ಟ್ಯೂಬ್ ಬೇಬಿಗೆ ಪರ್ಯಾಯ ಮಾರ್ಗಗಳ ಕುರಿತು ಮಾರ್ಗದರ್ಶನ • ಆಧುನಿಕ ಉಪಚಾರ, ಗರ್ಭನಾಳ ಜೋಡನೆ, ಸ್ತ್ರೀ ಬೀಜ ತಯಾರಾಗದೇ ಇರುವುದು ಮತ್ತು ಒಡೆಯದೇ ಇರುವುದು, ಗರ್ಭಾಶಯದ ಗಂಟು, ಗರ್ಭಾಶಯ ತೆಗೆಯುವುದು, ಗರ್ಭಧಾರಣೆಗೆ ತೊಂದರೆ, ಮೇಲಿಂದ ಮೇಲೆ ಗರ್ಭಪಾತ ಸಮಸ್ಯೆ, ಮುಟ್ಟಿನ ತೊಂದರೆ, ಬಿಳಿ ಸೆರಗು, ಸ್ತ್ರೀಯರಲ್ಲಿನ ಕ್ಯಾನ್ಸರ್, ತೂಕ ಕಡಿಮೆ ಮಾಡುವ ಉಪಚಾರ, ಪುರುಷರಲ್ಲಿ ಶುಕ್ರಾಣುಗಳ ಕೊರತೆ, ಅಶಕ್ತ ಶುಕ್ರಾಣು, ಇಂದ್ರೀಯ ಸಮಸ್ಯೆ, ಶೀಘ್ರ ಸ್ಖಲನ, ಸ್ತ್ರೀ-ಪುರುಷರಲ್ಲಿನ ಲೈಂಗಿಕ ಸಮಸ್ಯೆ, ಮದುವೆ/ಮದುವೆ ನಂತರದ ಸಮಸ್ಯೆಗಳಿಗೆ ಯೋಗ್ಯ ಮಾರ್ಗದರ್ಶನ ಮತ್ತು ಉಪಚಾರ ದೊರೆಯುತ್ತದೆ. ಅಂತರಾಷ್ಟ್ರೀಯ ಮಟ್ಟದ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಟೆಸ್ಟ್‌ಟ್ಯೂಬ್ ಬೇಬಿ ಪ್ರಯೋಗ ಶಾಲೆ • (IUI, IVF, ICSI, IMSI) ವೀರ್ಯ ಸಂಗ್ರಹ, ಸ್ತ್ರೀ ಬೀಜ ದಾನ, ವಿಟ್ರಿಫಿಕೇಶನ್) ಪುರುಷರ ಬಂಜೆತನ ಮತ್ತು ಲೈಂಗಿಕ ಸಮಸ್ಯೆಗಳ ಮೇಲೆ ಆಧುನಿಕ ಪದ್ಧತಿಯ ಉಪಚಾರ ಲಭ್ಯ
ಸಚೀನ ಹಾಸ್ಪಿಟಲ್ (ಟೆಸ್ಟ್‌ಟ್ಯೂಬ್ ಬೇಬಿ ಸೆಂಟರ್)
ಶಿವಾಜಿ ರೋಡ್, ಹೋಟೆಲ್ ಪ್ರಿಯದರ್ಶಿನಿ ಹತ್ತಿರ, ಮಿರಜ
ಡಾ. ಸಚೀನ 09422580842, 09765010834, ಡಾ. ನೇಹಾ 09421932401

ಔಷಧಿ ಲಭ್ಯ
ಸಂಧಿವಾತ (ಮೊಣಕಾಲು ನೋವು), ಅಸ್ತಮಾ, ಅಲರ್ಜಿ, ಮೂಲವ್ಯಾಧಿ, ಕಿಡ್ನಿಸ್ಟೋನ್‌ಗೆ ಖಾತ್ರಿ ಔಷಧಿ ಕೊಡಲಾಗುವುದು.
ಲಕ್ಷ್ಮೇಶ್ವರ, ಜಿ: ಗದಗ
Mobile Number 9148652908

SK CLASSIFIED
ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ತುಂಬಿದ ಮನೆಗೊಂದು ಚಂದದ ಸಾಪ್ತಾಹಿಕ ಕರ್ಮವೀರ

WANTED
HYDRA-MOBILE CRANE OPERATOR
2 years experience
Contact :
Southern Ferro Ltd.,
Industrial Estate,
Gokul Road, Hubli-580 030
M : 9379829015

ಇಲೆಕ್ಟ್ರಿಷಿಯನ್ ಬೇಕಾಗಿದ್ದಾರೆ
ಇಲೆಕ್ಟ್ರಿಕಲ್ ಕೆಲಸದಲ್ಲಿ ಅನುಭವವಿರುವ ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ.
ಸಂಪರ್ಕಿಸಿರಿ:
ಪಾಟೀಲ ಇಕೋ ಕೇರ್
ಹುಬ್ಬಳ್ಳಿ
ಮೊ: 9695031666
7353976837

HOUSE / OFFICE / GUEST HOUSE FOR RENT
Ground Floor 2-BHK
House / Office / Guest House
for Rent in Apartment
(Behind Hubli Scan Center)
@ Deshpande Nagar,
Hubli. Contact:
7022398793

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ-ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

ಮಾನಸಿಕ ಅಸ್ವಸ್ಥತೆ, ವ್ಯಸನ, ಲೈಂಗಿಕ ಸಮಸ್ಯೆಗಳು
ಸ್ಕಿಜೋಫ್ರೇನಿಯಾ, ಬೈಪೋಲಾರ್ ಮೂಡ್ ಡಿಸಾರ್ಡರ್, ಉನ್ಮಾದ, ಖಿನ್ನತೆ, ಒ.ಸಿ.ಡಿ., ವಾಮಾಚಾರ, ಮದ್ಯ, ತಂಬಾಕು, ಸಿಗರೇಟ್, ಗುಟಖಾ, ಮಾವಾ, ಗಾಂಜಾ, ಮಿಶ್ರಿ, ಡಿ-ಅಡಿಕ್ಷನ್, ಅಕಾಲಿಕ ಸ್ಖಲನ, ಶಕ್ತಿಹೀನತೆ, ಸ್ವಲನ, ಹಸ್ತಮೈಥುನದಿಂದ ದೌರ್ಬಲ್ಯ, ಲೈಂಗಿಕ ಸಮಸ್ಯೆಗಳು ಮತ್ತು ವೈದ್ಯರ ಆರೈಕೆ ಇತ್ಯಾದಿ ಸಮಸ್ಯೆಗಳಿಗೆ ಸಂಪರ್ಕಿಸಿರಿ:
ನಿರ್ಮಲ ವ್ಯಸನಮುಕ್ತಿ ಪುನರ್ವಸತಿ ಮತ್ತು ಆರೈಕೆ ಕೇಂದ್ರ
ಸ್ಟೇಷನ್ ರಸ್ತೆ, ಮಿರಜ್ (ಸಾಂಗಲಿ)
ಸಂಪರ್ಕ 9922646566
9028081339

SPACE FOR RENT
Ground Floor 1150 sq.ft.
First Floor 1250 Sq.ft.
R.S. Square, Opp. Bank of Maharashtra, Near Nehrunagar Water Tank, Gokul Road, Hubli
Contact:
M: 7899494991
9738910661

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ–ಮೇಲ್: skhubli@gmail.com